## ಡಬ್ಬಿಂಗ್‌ಗಳದ್ದೇ ಕಾರುಬಾರು

ಇತ್ತೀಚೆಗೆ ನಮ್ಮ ಟೀವಿ ವಾಹಿನಿಗಳು ಡಬ್ಬಿಂಗ್ ಧಾರಾವಾಹಿಗಳ ಹಾವಳಿ ಮಿತಿ ಮೀರುತ್ತಿದೆ. ತೆಲುಗು ಮತ್ತು ಹಿಂದಿ ಭಾಷೆಯ ಧಾರಾವಾಹಿಗಳಿಂದ ಕನ್ನಡತನಕ್ಕೆ ಕನ್ನಡ ಪರಿಸರಕ್ಕೆ ಸ್ವಲ್ಪವೂ ಹೊಂದಿಕೊಳ್ಳುವಂತೆ ಕಾಣುತ್ತಿಲ್ಲ. ಸಂಭಾಷಣೆ ಮತ್ತು ಆಂಗಿಕ ಚಲನೆಯೂ ಸೇರಿ ಪಾತ್ರಧಾರಿಗಳ ಮುಖಚಹರೆಗೆ ಲವಲೇಶವೂ ಹೊಂದಿಕೆ ಆಗುವುದೇ ಇಲ್ಲ. ಇನ್ನು ಪಾತ್ರಧಾರಿಗಳ ಆಯ್ಕೆ ನೋಡಿದರೆ ತೀರಾ ಕೃತಕ ಎನಿಸಿ ಬಿಡುತ್ತದೆ. ನಮ್ಮ ವಾಹಿನಿಗಳಿಗೆ ಕನ್ನಡ ಕಾದಂಬರಿಗಳು ಏಕೆ ಕಾಣುತ್ತಿಲ್ಲ.

ಪ್ರತಿದಿನ ಸುಮಾರು ಮೂವತ್ತು ಧಾರಾವಾಹಿಗಳು ಬರುತ್ತಿವೆ. ಎಲ್ಲವೂ ಮನೆಮುರುಕ ಪಾತ್ರಗಳನ್ನೇ ವಿಜೃಂಭಿಸುತ್ತವೆ. ಹಾಗಂತ ಹೆಣ್ಣುಮಕ್ಕಳೇ ಸ್ಟ್ರಾಂಗು ಎಂದರೆ ಅದಕ್ಕೆ ಪೂರಕವಾಗಿ ಕಥೆ ನಿರೂಪಣೆ ಆಗುವುದೂ ಇಲ್ಲ. ವಾರಾಂತ್ಯದಲ್ಲಿ ಎರಡೆರಡು ಧಾರಾವಾಹಿಗಳ ಮಹಾ ಸಂಚಿಕೆಗಳು ಗಂಟೆಗಟ್ಟಲೆ ಪ್ರಸಾರ ಆಗುತ್ತವೆ. ಅದರಲ್ಲೂ ಒಂದಕ್ಕೊಂದು ಹೊಂದಿಕೆ ಇರುವುದಿಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ತಡರಾತ್ರಿ ಧಾರಾವಾಹಿಗೆ ಬ್ರೇಕ್ ಹಾಕಿ

ಮನೆಯ ಜವಾಬ್ದಾರಿ ಹೆಚ್ಚಾಗಿ ಮಹಿಳೆಯರ ಮೇಲೆಯೇ ಇರುತ್ತದೆ. ಅವರು ತಿಂಡಿ, ಕಾಫಿ, ಅಡುಗೆ, ಮಕ್ಕಳ ಆರೈಕೆ ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ದಿನ ಪೂರ್ತಿ ಒಂದಲ್ಲ ಒಂದು ಕೆಲಸದಲ್ಲಿ ತೊಡಗುವ ಅವರಿಗೆ ಸ್ವಲ್ಪ ವಿರಾಮ ಸಿಗುವುದು ಸಂಜೆ ಆರು ಗಂಟೆಯ ನಂತರ. ಆ ಸಮಯದಲ್ಲಿ ಬೆಸತ್ತು ಮನಸ್ಸನ್ನು ತಣಿಸಲು ಮಹಿಳೆಯರು ಟೀವಿ ಮುಂದೆ ಕುಳಿತು ನಾಲ್ಕಾರು ಧಾರಾವಾಹಿ ನೋಡ್ತಾ ನೋಡ್ತಾ ಮರುದಿನದ ಮನೆಯ ಜವಾಬ್ದಾರಿ ಬಗ್ಗೆಯೂ ಚಿಂತಿಸುತ್ತಾರೆ.

ಕಲರ್ಸ್ ಕನ್ನಡದ ಕೆಲವು ಧಾರಾವಾಹಿಗಳ ಸಮಯ ಬದಲಾವಣೆ ಮಾಡಿದ್ದಾರೆ. ಈ ಮೊದಲು ರಾತ್ರಿ 9.30ಕ್ಕೆ ಇದ್ದದ್ದು ರಾತ್ರಿ 10.30ಕ್ಕೆ ಹಾಕಿದ್ದಾರೆ. ಅದು 11ಗಂಟೆಯ ತನಕ ಆಗುತ್ತದೆ. ಎಂದಿನಂತೆ ಬೆಳಿಗ್ಗೆ ಬೇಗ ಏಳುವುದರಿಂದ ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಬೇಗ ಮಲಗಿ ಬೇಗ ಏಳುವುದು ಆರೋಗ್ಯದ ದೃಷ್ಟಿಯಿಂದ ಒಳಿತು. ಈ ಕಾರಣಕ್ಕೆ ಧಾರಾವಾಹಿಯ ಸಮಯವನ್ನು ರಾತ್ರಿ 10ಕ್ಕೆ ಮುಗಿಸುವುದು ಸೂಕ್ತ ಅಲ್ಲವೇ?

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

ವಾರದ ಪತ್ರ

## ಟೀವಿ ಎಂಬ ಮಾಯಾಜಾಲ

ದೂರದರ್ಶನ ಶುರುವಾದ ಹೊಸತರಲ್ಲಿ ಉತ್ತಮ ಧಾರಾವಾಹಿಗಳು ಬರುತ್ತಿದ್ದವು. ಕುಟುಂಬದವರೆಲ್ಲಾ ಒಟ್ಟಿಗೆ ಕುಳಿತು ಸಂಭ್ರಮದಿಂದ ನೋಡುತ್ತಿದ್ದೆವು. ವಾರಕ್ಕೆ ಒಂದು ಎಪಿಸೋಡ್ ಬರುತಿತ್ತು, ಮುಂದಿನ ಕಂತು ನೋಡಲು ಒಂದು ವಾರ ಕಾಯಬೇಕಿತ್ತು. ಆ ಕಾಯುವಿಕೆಯೂ ಸಂತೋಷ ಕೊಡುತ್ತಿತ್ತು.

ಖಾಸಗಿ ಚಾನಲ್ ಶುರುವಾದ ಮೇಲೆ ಪ್ರತಿದಿನವೂ ಒಂದು ಎಪಿಸೋಡ್ ಬರುತ್ತಿದೆ. ಅಂತಹ ಸಾವಿರಾರು ಎಪಿಸೋಡಿನ ಧಾರಾವಾಹಿಗಳನ್ನೇ ಅವರು ಮಾಡುತ್ತಿದ್ದಾರೆ. ಅದಕ್ಕಾಗಿ ಪಾತ್ರಗಳನ್ನೇ ಬದಿಗೆ ಸರಿಸಿ ಕಥೆಗೊಂದು ಉಪಕಥೆ, ಹಿನ್ನೆಲೆ ಅಂತ ತೋರಿಸುತ್ತಾ ಸೂತ್ರವಿಲ್ಲದ ಗಾಳಿಪಟದಂತೆ ಹಾರಿಸುತ್ತಾರೆ. ಶುರುವಿನಲ್ಲಿ ಪ್ರತಿಯೊಂದು ಕಥೆಯೂ ವಿಭಿನ್ನವಾಗಿರುತ್ತದೆ ಎಂದು ಕುತೂಹಲದಿಂದ ನೋಡಲು ಶುರುಮಾಡಿದರೆ ಮತ್ತೆ ಅದೇ ಶ್ರೀಮಂತಿಕೆ, ಬಂಗಲೆ, ಖಳರು, ಜೀವನದಲ್ಲಿ ನಡೆಯದಂತಹ ಕಥೆ, ತುಂಡು ಉಡುಗೆಗಳು, ಮನೆಯ ಹಿರಿಯರಿಗೆ ಚಳ್ಳೆಹಣ್ಣು ತಿನ್ನಿಸುವ ಮಕ್ಕಳು. ಸಮಾಜಕ್ಕೆ ಕೆಟ್ಟ ಸಂದೇಶವನ್ನು ನೀಡುವ ಇಂಥ ಧಾರಾವಾಹಿಗಳ ಅಗತ್ಯವೇನಿದೆ.

ಸಮಯ ಕಳೆಯಲು ಧಾರಾವಾಹಿ ಎಂಬ ಮಾಯಾಜಾಲದೊಳಗೆ ಅನೇಕರು ಸಿಲುಕಿದ್ದಾರೆ. ಬೇಸರಿಸಿಕೊಂಡೇ ಧಾರಾವಾಹಿಗಳನ್ನು ವೀಕ್ಷಿಸುತ್ತಾರೆ. ಹಿಂದಿನ ಓದುವ ಹವ್ಯಾಸ ಈಗ ನೋಡುವ ಹವ್ಯಾಸವಾಗಿ ಪರಿವರ್ತನೆಯಾಗಿದೆ. ಓದುವ ಅಭ್ಯಾಸವೇ ಒಳಿತು ಎಂದು ಈಗನಿಸುತ್ತಿದೆ.

—ವೀಣಾ ಶಂಕರ್, ಬೆಂಗಳೂರು



## ಆ ಕರ್ಣನಂತೆಯೇ...

ಝೀ ಟೀವಿಯಲ್ಲಿ 'ಕರ್ಣ' ಎಂಬ ಹೊಸ ಧಾರಾವಾಹಿಯ ಪ್ರೋಮೊ ಪ್ರಸಾರವಾಗುತ್ತಿದೆ. ವಿಷ್ಣುವರ್ಧನ್ ಅಭಿನಯದ 'ಕರ್ಣ' ಸಿನಿಮಾದ ನಕಲಿ ದೃಶ್ಯಗಳು ಸರಿ ಅನ್ನಿಸುತ್ತಿಲ್ಲ. ಇಲ್ಲಿ ಕಥಾನಾಯಕ ನಿರುದ್ಯೋಗಿ ಅಲ್ಲ. ವೈದ್ಯನಂತೆ ಕಾಣುತ್ತಾನೆ. ಏತಕ್ಕಾಗಿ ಈ ರೀತಿ ಕಥೆಗಳನ್ನು ಕದಿಯಬೇಕು? ಕಡೆಯ ಪಕ್ಷ ಶೀರ್ಷಿಕೆಯನ್ನಾದರೂ ಬದಲಿಸಬಹುದಲ್ಲವೇ? ಕನ್ನಡ ಸಾಹಿತ್ಯ ಲೋಕ ಅಷ್ಟು ಬಡವಾಗಿದೆಯೇ?

—ವಾ. ಮುರಳೀಧರ, ತೀರ್ಥಹಳ್ಳಿ

## ಅನಂತ ಪ್ರತಿಭೆ

ಚಂದನದಲ್ಲಿ ಮೇರುನಟ ಅನಂತನಾಗ್ ಅವರ ಜೊತೆಗಿನ ಮಾತುಕತೆ ತುಂಬ ಚೆನ್ನಾಗಿತ್ತು. ಅವರ ಅನೇಕ ಸಿನಿಮಾಗಳು ನೈಜ ಬದುಕಿನ ಪ್ರತಿಬಿಂಬದಂತೆ ಇದ್ದವು. ಜೋಗಿ, ಅನಂತನಾಗ್ ಅವರ ಅನಂತ ಪ್ರತಿಭೆಯನ್ನು ಪರಿಚಯಿಸಿದರು.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಅಚ್ಚರಿಯ ಕಥೆ

ಆರಂಭದಲ್ಲಿ ತುಂಬಾ ಕುತೂಹಲ ಕೆರಳಿಸಿದ್ದ ಕಲರ್ಸ್ ಕನ್ನಡದ 'ರಾಮಾಚಾರಿ' ಗೊತ್ತುಗುರಿ ಇಲ್ಲದೆ ಸಾಗಿದೆ. ವೈಶಾಖಾಳ ಮಾತನ್ನು ನಂಬಿ ಅವಳ ಗಂಡ ಜೈಲಿನಿಂದ ಬಿಡಿಸಿಕೊಂಡು ಬರುತ್ತಾನೆ. ಅವಳ ಸ್ವಭಾವ ಗೊತ್ತಿದ್ದರೂ ಅವಳ ಕಾಲ ಬಾಧೆಯನ್ನು ವೈದ್ಯರಿಗೆ ತೋರಿಸುವುದಿಲ್ಲ. ಅವಳನ್ನು ನಂಬಿ ಚಾರು ಅವಳಿಗಾಗಿ ಉರುಳು ಸೇವೆ ಮಾಡುವುದು ಮುಡಿ ಕೊಡುವ ಅಂಧಕಾರದಿಂದ ಮೆರೆಯುವುದು ಹಾಸ್ಯಾಸ್ಪದ. ಸೈಬರ್ ಅಪರಾಧಗಳ ತಡೆಗೆ ಎಷ್ಟೆಲ್ಲ ಅನುಕೂಲತೆಗಳಿದ್ದರೂ ಪೊಲೀಸರನ್ನು ಸಂಪರ್ಕಿಸದೆ ಇರುವುದು ತುಂಬಾ ಆಶ್ಚರ್ಯವನ್ನುಂಟು ಮಾಡುತ್ತದೆ.

—ಮುರಲೀಧರ ಕುಲಕರ್ಣಿ, ಬೀದರ್

## ಥಟ್ ಅಂತ ಹಾರಿತು ಪಾತರಗಿತ್ತಿ!

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮ ಈ ವಾರ ವಿಶೇಷವಾಗಿತ್ತು. ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಚಿಟ್ಟೆಗಳ ಜೀವನಕ್ರಮದ ಸಮಗ್ರ ಮಾಹಿತಿಯನ್ನು ಅದು ಒಳಗೊಂಡಿತ್ತು. ಅಲ್ಲಿಯ ಸಿಬ್ಬಂದಿ ಆಲಂಕಾರಿಕ ವಿವಿಧ ಹೂವಿನ ಗಿಡಗಳನ್ನು ಪೋಷಿಸಿ ಚಿಟ್ಟೆಗಳನ್ನು ಬೆಳೆಸಲು ತುಂಬ ನಿಗಾ ವಹಿಸುತ್ತಾರೆ. ಇಲ್ಲಿ ವೈವಿಧ್ಯ ಪಾತರಗಿತ್ತಿಗಳನ್ನು ನೋಡಬಹುದು.

—ಭಾರತೀ ಗಂಗಾಧರ್, ಬೆಂಗಳೂರು